**ಓ.ಎಸ್.ನಂ.388/2016**

**ಪಿ.ಡಬ್ಲ್ಯು:1**

**ದಿನಾಂಕ:06-03-2020 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**<u>ಪಾಟೀ ಸವಾಲು: ಪ್ರತಿವಾದಿಗಳ ಪರ ಶ್ರೀ.ಕೆ.ಪಿ.ಎನ್., ವಕೀಲರಿಂದ:</u>**

ನಾನು ನಿಪಿ-5ಕ್ರಯಪತ್ರದಲ್ಲಿ ನಮೂದಿಸಿರುವ ಆಸ್ತಿಯನ್ನೆ ನಿಪಿ-1 ಕ್ರಯಪತ್ರದ ಮುಖಾಂತರ ನಾನು ಖರೀದಿ ಮಾಡಿದ್ದೇನೆಂದರೆ ಸರಿ. ನಿಪಿ-5 ಕ್ರಯಪತ್ರದಲ್ಲಿ ಇರುವ ಆಸ್ತಿಯ ಪೂರ್ವಕ್ಕೆ ಜಿ.ಡಿ ಚಾವ್ಡಾ ಎಂದು ತೋರಿಸಿರುವ ಆಸ್ತಿ ಜಿ.ಡಿ ಚಾವ್ಡಾರವರು ಸಣ್ಣವೆಂಕಟಪ್ಪರವರಿಂದ ಖರೀದಿ ಮಾಡಿರುತ್ತಾರೆ.ನಿಪಿ-5 ಕ್ರಯಪತ್ರದಲ್ಲಿ ಇರುವ ಆಸ್ತಿಯ ಪಶ್ಚಿಮಕ್ಕೆ ಕೊಲ್ಲಾರಿ ಮರುಳಯ್ಯರವರ ಆಸ್ತಿಯಲ್ಲಿ ತೋರಿಸಿರುವ ಆಸ್ತಿಯಲ್ಲಿ ಈಗ ಯಾರು ಇದ್ದಾರೆ ಎಂದು ಗೊತ್ತಿಲ್ಲ. ದಾವಾ ಆಸ್ತಿಯ ಉತ್ತರ ದಿಕ್ಕಿಗೆ ಕೆ.ಎಂ ರಸ್ತೆ ಬರುತ್ತದೆ. ದಾವಾ ಆಸ್ತಿಯು ಉತ್ತರ ದಿಕ್ಕಿಗೆ ಕೆಎಂ ರಸ್ತೆ ಬರುತ್ತದೆ ಎಂದು ನಿಪಿ-5 ಕ್ರಯಪತ್ರದ ಆದಾರದಲ್ಲಿ ಹೇಳುತ್ತಿದ್ದೇನೆ. ನಿಪಿ-6 ಕ್ರಯಪತ್ರದ ಮುಖಾಂತರ ನನ್ನ ಕ್ರಯದಾರರಾದ ರವೀಂದ್ರವರಿಗೆ ಎರಡು ಆಸ್ತಿಗಳು ಕ್ರಯದ ಮೂಲಕ ಬಂದಿರುತ್ತವೆ. ನಿಪಿ-6 ಕ್ರಯಪತ್ರದಲ್ಲಿ ದಾವಾ ಆಸ್ತಿಯ ಪಶ್ಚಿಮ ದಿಕ್ಕಿಗೆ ಕೆ.ಎಂ ರಸ್ತೆ ಇದೆ ಎಂದು ತೋರಿಸಿರುತ್ತಾರೆ. ನಿಪಿ-6 ಕ್ರಯಪತ್ರದಲ್ಲಿ ದಾವಾ ಆಸ್ತಿಯ ಪಶ್ಚಿಮ ದಿಕ್ಕಿನಲ್ಲಿ ಉತ್ತರ-ದಕ್ಷಿಣವಾಗಿ ಆಸ್ತಿಯ ಅಳತೆ ಎಷ್ಟು ಎಂದು ನಮೂದಿಸಿದ್ದಾರೆ ಗೊತ್ತಿಲ್ಲ. ನಿಪಿ-6 ಕ್ರಯಪತ್ರದಲ್ಲಿ ದಾವಾ ಆಸ್ತಿಯ ವಿಸ್ತೀರ್ಣ ಪೂರ್ವ, ಪಶ್ಚಿಮ, ಉತ್ತರ ಮತ್ತು ದಕ್ಷಿಣ ದಿಕ್ಕಿನಲ್ಲಿ ಇಷ್ಟಿಷ್ಟು ಅಳತೆ ಇದೆ ಎಂದು ನಮೂದಿಸಿರುವುದಿಲ್ಲ ಎಂದರೆ ಗೊತ್ತಿಲ್ಲ.

ನಾನು ಈ ದಾವೆಯಲ್ಲಿ ದಾವಾ ಆಸ್ತಿಯ ವಿಸ್ತೀರ್ಣ ಉತ್ತರ ದಿಕ್ಕಿಗೆ 280 ಅಡಿಗಳಿವೆ ಎಂದು ತೋರಿಸಿರುತ್ತೇನೆ, 272 ಅಡಿಗಳು ಎಂದು ಆಸ್ತಿಯ ಪೂರ್ವ

ದಿಕ್ಕಿನ ವಿಸ್ತೀರ್ಣ ವನ್ನು ತೋರಿಸಿರುತ್ತೇನೆ, ಪಶ್ಚಿಮ ದಿಕ್ಕಿಗೆ 198 ಅಡಿಗಳು ಎಂದು ತೋರಿಸಿರುತ್ತೇನೆ. ದಾವಾ ಆಸ್ತಿಯ ದಕ್ಷಿಣ ದಿಕ್ಕಿನಲ್ಲಿ ಎಷ್ಟು ವಿಸ್ತೀರ್ಣದ ಆಸ್ತಿ ಇದೆ ಎಂದು ಗೊತ್ತಿಲ್ಲ. ದಾವಾ ಆಸ್ತಿಯ ಉತ್ತರದಿಕ್ಕಿನಲ್ಲಿರುವ ರಸ್ತೆ ಕೆಎಂ ರಸ್ತೆ ಎಂದರೆ ಸರಿ, ಸದರಿ ಕೆಎಂ ರಸ್ತೆ ಎನ್.ಹೆಚ್-173 ಆಗಿ 2 ವರ್ಷಗಳ ಹಿಂದೆ ಪರಿವರ್ತನೆಯಾಗಿರುತ್ತದೆ. ರಾಷ್ಟ್ರಿಯ ಹೆದ್ದಾರಿಯ ಅಕ್ಕಪಕ್ಕದಲ್ಲಿರುವ ನಿವೇಶನಗಳಿಗೂ ಹೆದ್ದಾರಿಯಿಂದ ದೂರವಿರುವ ನಿವೇಶನಗಳಿಗೆ ಬೆಲೆಯಲ್ಲಿ ವ್ಯತ್ಯಾಸ ಇದೆ ಎಂದರೆ ಗೊತ್ತಿಲ್ಲ. ನಾನು ವಿದ್ಯುತ್ ಗುತ್ತಿಗೆದಾರನಾಗಿ ಕೆಲಸ ಮಾಡುತ್ತೇನೆ. ದಾವಾ ಆಸ್ತಿಯು ಸ.ನಂ.198/3 ರಲ್ಲಿ ಬರುತ್ತದೆ. ದಾವಾ ಆಸ್ತಿಯ ಆಕಾರ್ ಬಂದ್ ನಕ್ಷೆಯನ್ನು ನೋಡಿರುತ್ತೇನೆ. ದಾವಾ ಆಸ್ತಿಯ ದಕ್ಷಿಣ ದಿಕ್ಕಿನಲ್ಲಿ ಆಸ್ತಿಯ ವಿಸ್ತೀರ್ಣ ಎಷ್ಟಿದೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಪೂರ್ವ ದಿಕ್ಕಿನಲ್ಲಿ ಯಶೋಧಮ್ಮರವರ ಆಸ್ತಿ ಎಂದು ತೋರಿಸಿರುವ ಆಸ್ತಿ ಈಗ ಪ್ರತಿವಾದಿಗಳಿಗೆ ಸೇರಿದ ಆಸ್ತಿಯಾಗಿದೆ ಎಂದರೆ ಸರಿ. ದಾವಾ ಆಸ್ತಿಯ ಉತ್ತರದಿಕ್ಕಿನಲ್ಲಿ 280 ಅಡಿಗಳು ವಿಸ್ತೀರ್ಣ ಎಂದು ತೋರಿಸಿದ್ದು ಅದರ ವಿರುದ್ದ ದಿಕ್ಕಾದ ದಕ್ಷಿಣ ದಿಕ್ಕಿನಲ್ಲಿಯು ಸಹ 280 ಅಡಿಗಳ ವಿಸ್ತೀರ್ಣದ ಆಸ್ತಿ ಇದೆ ಎಂದು ಪ್ರತಿವಾದಿಗಳ ಆಸ್ತಿಯನ್ನು ಒತ್ತುವರಿ ಪ್ರಯತ್ನಿಸಿರುತ್ತೇನೆಂದರೆ ಸರಿಯಲ್ಲ. ಸದರಿ ಕಾರಣದಿಂದಲೇ ಪ್ರತಿವಾದಿಗಳು ನನ್ನ ವಿರುದ್ದ ಅಸಲು ದಾವಾ ಸಂ.376/2016 ನ್ನು ಇದೇ ನ್ಯಾಯಾಲಯದಲ್ಲಿ ದಾಖಲು ಮಾಡಿದ್ದಾರೆಂದರೆ ಸಾಕ್ಷಿಯು ಸುಳ್ಳು ದಾವೆ ದಾಖಲಿಸಿದ್ದಾರೆಂದು ನುಡಿಯುತ್ತಾರೆ.

ನಿಪಿ-1 ಕ್ರಯಪತ್ರದ ಸ್ವತ್ತಿನ ವಿವರದಲ್ಲಿ ದಾವಾ ಆಸ್ತಿಯ ಒಟ್ಟು ವಿಸ್ತೀರ್ಣ 65 ಸಾವಿರದ 800 ಚದರ ಅಡಿ ಎಂದು ಬರೆಸಿದ್ದು ದಾವಾ ಆಸ್ತಿಯ ವಿಸ್ತೀರ್ಣ ಉತ್ತರದಲ್ಲಿ 280 ಅಡಿಗಳು ಮತ್ತು ದಕ್ಷಿಣದಲ್ಲಿ 280 ಅಡಿಗಳು

**ಓ.ಎಸ್.ನಂ.388/2016**
**ಪಿ.ಡಬ್ಲ್ಯೂ:1**

ಎಂದು ಪರಿಗಣಿಸಿ ನಮೂದಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನಾನು ನಿಪಿ-1 ರ ಮುಖಾಂತರ ಖರೀದಿಸಿರುವ ಆಸ್ತಿಯ ವಿಸ್ತೀರ್ಣಕ್ಕಿಂತ ಹೆಚ್ಚಿನ ಅಸ್ತಿಯನ್ನು ಕಬಳಿಸುವ ಸಲುವಾಗಿ ಸುಳ್ಳು ವಿಸ್ತೀರ್ಣ ನಮೂದಿಸಿ ಈ ದಾವೆ ದಾಖಲು ಮಾಡಿದ್ದೇನೆಂದರೆ ಸರಿಯಲ್ಲ. ಕೆಎಂ ರಸ್ತೆಕಡೆಗೆ ಹೆಚ್ಚು ವಿಸ್ತೀರ್ಣದ ಆಸ್ತಿಯನ್ನು ಪಡೆಯುವ ಸಲುವಾಗಿ ನಿಪಿ-7 ತಿದ್ದುಪಡಿ ಕ್ರಯಪತ್ರವನ್ನು ಮಾಡಿಸಿಕೊಂಡಿರುತ್ತೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**
(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)
ಓ.ಹೇ.ಕೇ.ಸ.ಇ.ಎ.ಒ.

(ದೀಪು ಎಂ.ಟಿ.)
3 ನೇ.ಹೆ.ದಿ.ನ್ಯಾ.& ಪ್ರಃದಃನ್ಯಾಃದಂ.,ರವರು,
ಕಡೂರು.